# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಜೀವ ಪರಮರ ಕಲ್ಯಾಣ

ಕವಿ

## ಕಿಬ್ಬಚ್ಚಲು ಮಂಜಮ್ಮ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಕಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಕಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

# ಸಾರಾಂಶ

**ಪ್ರಸಂಗ ವಿಧ:**

ಕಾಲ್ಪನಿಕ (ವೇದಾಂತ ತತ್ವಸಾರ)

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಹವ್ಯಕ ಅಧ್ಯಯನ ಕೇಂದ್ರ, ಅಖಿಲ ಹವ್ಯಕ ಮಹಾಸಭಾ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೮೬

**ಪಾತ್ರಗಳು:**

ಹಂಕರ, ಸುಖೇಚ್ಛೆ, ದುಷ್ಟಮತಿ, ಶಾಂತಮತಿ

**ಕಥಾಸಾರಾಂಶ:**

ಇದೊಂದು ವೇದಾಂತ ವಿಷಯದ ಪ್ರಸಂಗವಾಗಿದ್ದು, ಹಂಕರ, ಸುಖೇಚ್ಛೆ, ದುಷ್ಟಮತಿ, ಶಾಂತಮತಿ ಮುಂತಾದ ಪಾತ್ರಗಳನ್ನು ಗುಣ-ದೋಷಗಳಿಗೆ ಮೂರ್ತರೂಪವನ್ನಾಗಿಸಿ ಪ್ರಸಂಗ ರಚನೆಯಾಗಿದೆ. ದುಷ್ಟಮತಿಗೂ ಶಾಂತನಿಗೂ ಯುದ್ಧವಾಗಿ ದುಷ್ಟಮತಿಯ ಎಲ್ಲ ಅಸ್ತ್ರಗಳಿಗೂ ಪ್ರತ್ಯಸ್ತ್ರಗಳನ್ನು ಬಿಟ್ಟು ದುಷ್ಟಮತಿ ಪರಾಜಿತನಾಗಿ ವಿವೇಕ ಮೂಡುತ್ತದೆ. ದುಷ್ಟಮತಿಗೆ ಜ್ಞಾನಮತಿಯೆಂಬ ಮಗಳು ಜನಿಸುತ್ತಾಳೆ. ಪರಮಪುರುಷನೇ ಅವಳಿಗೆ ವರ. ಇವರ ಕಲ್ಯಾಣವೇ ಜೀವ ಪರಮರ ಕಲ್ಯಾಣ.

**ಕವಿ ಪರಿಚಯ :**

ಪ್ರಸಂಗಕರ್ತೆ ಮಂಜಮ್ಮ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕಿಬ್ಬಚ್ಚಲಿನವಳು. ಕಿಬ್ಬಚ್ಚಲು ಎಂಬವದು ಹಂಸಗಾರು ಗ್ರಾಮದ ಒಂದು ಪುಟ್ಟ ಮಜರೆ. ದಟ್ಟ ಮಲೆನಾಡಿನ ಮಧ್ಯದಲ್ಲಿರುವ ಈ ಊರಿನಲ್ಲಿ ಮಂಜಮ್ಮನ ಸಂಸಾರ. ಅಲ್ಲಿ ದೊರೆತ ಮಾಹಿತಿಗಳಿಂದ ಈಕೆಯ ಕಾಲ ೧೮೩೦ ರಿಂದ ೧೯೦೦ ಸುಮಾರಿಗೆ ಎಂದು ಊಹಿಸಬಹುದು. ದೈವಭಕ್ತೆಯಾದ ಇವಳಿಗೆ ಓದು ಬರಹ ಬರುತ್ತಿರಲಿಲ್ಲವಂತೆ. ವೇದಾಂತದ ಮೇಲೆ ಆಸಕ್ತಿ. ತಪಸ್ಸಿಗೆ ಕುಳಿತು ಧ್ಯಾನ ಮಾಡಿ ಎದ್ದಾಗ ಅವಳ ಬಾಯಿಂದ ವೇದಾಂತ, ಕಾವ್ಯ, ಯಕ್ಷಗಾನದ ಪದ್ಯಗಳೆಲ್ಲ ಸಹಜವಾಗಿ ಉದುರುತ್ತಿದ್ದವಂತೆ. ಅವಳ ದೂರದ ಸಂಬಂಧಿ ಹಿರೇಮನೆ ರಾಮನಾಥಯ್ಯನವರು ಅವುಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರಂತೆ. ತಮ್ಮ ಕಷ್ಟವನ್ನು ಹೇಳಲು ಬಂದವರಿಗೆ ವೇದಾಂತದ ಉತ್ತರವನ್ನು ನೀಡಿ ಬದುಕನ್ನು ಎದುರಿಸಲು ಪ್ರೇರಣೆ ನೀಡುತ್ತಿದ್ದಳಂತೆ. ವೇದಾಂತ ತತ್ವಸಾರವು ಪ್ರಸಂಗಕರ್ತೆಯರ ಯಕ್ಷಗಾನ ಪ್ರಸಂಗಗಳಲ್ಲಿ ಪ್ರಪ್ರಥಮವಾಗಿ ಮುದ್ರಣಗೊಂಡ ಕೃತಿ. ವೇದಾಂತ ತತ್ವಸಾರದಲ್ಲಿ ಮಂಜಮ್ಮನ ಜೀವ ಪರಮರ ಕಲ್ಯಾಣ ಹಾಗೂ ಮನೋಬುದ್ಧಿ ಸಂವಾದ ಇವೆರಡೂ ಪ್ರಸಂಗಗಳೂ ಇವೆ.

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ನಾಟಿ - ರೂಪಕ**
ಗುರುಗಣಪತಿಗೊಂದಿಸಿ ವರಶಾರದೆರಮಣನ ಸ್ಮರಿಸುತ |
ಸಿರಿಪತಿ ನಾರಾಯಣನ ಶಿವ ಗೌರಿಯ ಬಲಗೊಂಡು ||
ಕರಣೇಂದ್ರಿಯ ಜೀವಗೆ ಗುರು ಪರಮಾಹಂಸರ ಸಿರಿಪದ |
ಸರಸಿಜಕೆರಗುವೆ ಮತಿಯಂ ಕರುಣಿಸಿ ರಕ್ಷಿಪುದು || ೧ ||

**ತುಜಾವಂತು - ಝಂಪೆ**
ದೀರ್ಘದಿಂ ಬೆಳಗಿ ತನು | ವರ್ಗದಲಿ ರಂಜಿಪ ಸ |
ಮಗ್ರ ಗಣಪತಿಯ ಶಿವ ದುರ್ಗೆಯರ ಪದಕೆ ||
ಶೀಘ್ರದಿಂದೆರಗಿ ಪುರ | ಭರ್ಗನಿಗೆ ಕೈ ಮುಗಿವೆ |
ಜಾಗ್ರತೆಯಲೀವುದೆನಗಗ್ರಸಮ್ಮತಿಯ || ೨ ||

ಮುಕ್ತಿದಾಯಕಿ ಸರ್ವ | ಉಕ್ತಿಯೊಳು ಬೆಳಗುತಿಹ |
ಶಕ್ತಿ ಸರಸ್ವತಿ ಸುಲಲಿತೋಕ್ತ ಗುರುಪದಕೆ ||
ಭಕ್ತಿಯಿಂದೆರಗಿ ಕರ | ಗಳ ಮುಗಿದು ಬೇಡುವೆಯ |
ಥೋಕ್ತದಿಂದೆನ್ನ ಹೃದಯದಲಿ ನೆಲಸಮ್ಮ || ೩ ||

ಮಂಗಲಾತ್ಮಕನೆ ಸ | ರ್ವಾಂಗದಲಿ ಬೆಳಬೆಳಗಿ |
ಹಿಂಗದೇ ಯೆನ್ನಂತರಂಗದೊಳಗಿರುವ ||
ಶೃಂಗಾರವಾದ ಶ್ರುತಿ | ಸಂಗದಲಿ ಪ್ರಣವಮಯ |
ರಂಗಮೂರುತಿ ಗುರುವಿನಂಘ್ರಿಗೊಂದಿಸುವೆ || ೪ ||

**ಭಾಮಿನಿ**
ಸರುವದೇವತೆಗಳಿಗೆ ಭಕ್ತಿಯೊ |
ಳೆರಗಿ ನುತಿಸುವೆ ಬಳಿಕ ಮಾಯಾ |
ಮೆರೆವ ಪ್ರಕೃತಿಯ ಮಾಟದಿಂ ಜಡ ಮರವೆಯೊಳಗಿರ್ದು ||
ಪೊರೆವ ಪರಮಾತುಮನು ತಾನೇ |
ಯರುವಿನೊಳಗರುವಾಗಿ ಬೆಳಗುವ |
ಪರಮಗುರು ಕರಿಮುಖನ ಕರುಣದಲೊರೆವೆನೀ ಕೃತಿಯ || ೫ ||

**ಸೌರಾಷ್ಟ್ರ - ತ್ರಿವುಡೆ**
ಒಂದು ದಿನ ಗುರು ಪೀಠದೊಳಗಿರ |
ಲಂದು ವೈರಾಗ್ಯದಲಿ ಶಿಷ್ಯನು|
ಬಂದು ದೃಢಭಕ್ತಿಯಲಿ ಗುರುಪದ | ಕೊಂದಿಸಿದನು || ೬ ||

ನಿಂದು ಕರಗಳ ಮುಗಿದು ಈ ಭವ |
ಸಿಂಧುವನು ನೆರೆಕಳೆವುಪಾಯವ |
ನಂದದಲಿ ದಯ ಮಾಡಿ ರಕ್ಷಿಪು | ದೆಂದನಾಗ || ೭ ||

ಆದಡೀತನು ಕರಣವೃತ್ತಿಗ |
ಳಾದ ಪರಿಯೆಂತದನು ಕೇಳುವೆ |
ಬಾಧಿಸುವ ಸುಖ ದುಃಖವೆಂಬೀ | ಭೇದಗಳನು || ೮ ||

ಆದಿಯಲಿ ತೋರುವ ಪ್ರಪಂಚಗ |
ಳಾದ ವೃತ್ತಾಂತಗಳನೆಲ್ಲವ |
ಹೇ ದಯಾಂಬುಧಿ ಗುರುವೆ ನನಗದ | ಬೋಧಿಸುವುದು || ೯ ||

ತಂದೆ ಗುರು ಚಿತ್ತವಿಸು ಮತ್ತಿ |
ನ್ನೊಂದು ಬಿನ್ನಹಮಾಡಿ ಕೇಳುವೆ |
ಬಂದ ಭವಕೋಟಲೆಯನೆಲ್ಲವ | ಹಿಂದುಗಳದು || ೧೦ ||

ಚಂದದಿಂದಲೆ ಜೀವ ಪರಮರೊ |
ಳೊಂದೆಯಾಗುವ ಪರಿಯದೆಂತದ |
ರಂದವನುಯರುಹೆನುತ ಗುರುಪದ | ಕೊಂದಿಸಿದನು || ೧೧ ||

ಈ ಪರಿಯ ಭಕ್ತಿಯಲಿ ಭವ ಭಯ |
ತಾಪವನು ಪರಿಹರಿಸಬೇಕೆನ |
ಲಾ ಪರಮ ಕರುಣಾಳು ಗುರುವರ | ದೀಪಬಳಿಕ || ೧೨ ||

ಶ್ರೀಪತಿಯ ನಿಜಭಕ್ತ ಜನಕುಲ |
ದೀಪನೇ ಬಾರೆನುತ ಶಿಷ್ಯಂ |
ಗಾ ಪರಮ ಸಾಂಖ್ಯಾದಿಗಳನನು | ಲಾಲಿಸಿದನು || ೧೩ ||

ಚನ್ನಗಿಯೆ ಕೇಳ್ಮಗನೆ ಪೇಳುವೆ |
ಮುನ್ನ ಮಾತಾಪಿತರ ಪಾಶದಿ |
ತನ್ನ ಪುರುಷನನರಿಯದಿರುತಿಹ | ಕನ್ನೆಯಂತೆ || ೧೪ ||

ಭಿನ್ನ ಮಾಯದ ಮತದಿ ಜೀವನು |
ವುನ್ನತದ ತನುಕರಣಪಾಶದಿ |
ತನ್ನ ಚೈತನ್ಯಾತ್ಮನನು ಮ | ರೆದಿನ್ನು ಮನದಿ || ೧೫ ||

**ಭಾಮಿನಿ**

ಅರಿದು ಕೇಳ್ಳೈ ಮಗನೆ ಪಿತೃಗೃಹ |
ಮರೆದು ಯವ್ವನ ಬರಲು ಸತಿಯರು|
ನೆರೆದು ತಮ್ಮಯ ಪುರುಷರೊಳಗೆರಕವನು ಪಡೆವಂತೆ ||
ಗುರುಮುಖದಲದನರಿದು ತನುವನು |
ಮರೆದು ಜೀವಾತುಮನ ಕೂಡಿದ |
ಪರಿಯ ವಿಭವದ ಶುಭ ಚರಿತ್ರೆಯನೊರೆವೆ ಕೇಳೆಂದ || ೧೬ ||

**ಭೈರವಿ - ಝಂಪೆ**

ತನ್ನ ನಿಜ ತೇಜದಲಿ | ವುನ್ನತದ ಪ್ರಭೆಗಳಲಿ |
ಚನ್ನಾಗಿ ಬೆಳಗುತಿಹ | ಮುನ್ನೋರ್ವ ದೊರೆಯು || ೧೭ ||

ಇರುತಿರಲು ಸ್ವಸ್ಥನೃಪ | ಭರದಿ ತನ್ನಿಚ್ಛೆಯೊಳು |
ಗುರುವಿನಲಿ ಸುತನವಗೆ | ವೋರ್ವನುದಿಸಿದನು || ೧೮ ||

ತರುಣಿಯಲಿ ಪ್ರತಿಬಿಂಬ | ಭರದಿ ತೋರುವ ತೆರದಿ |
ಮೆರೆವಹಂಕರನೆಂಬ | ತರಳನಾತನಲಿ || ೧೯ ||

ಶೂನ್ಯಭೂಪತಿ ಮಗಳು | ಮಾನ್ಯೇ ಸುಖೇಚ್ಛೆಯಳು |
ಕನ್ನೆವರನೆನಿಸಿ ಸಂ | ಪನ್ನನೆಸೆದಿಹನು || ೨೦ ||

ಚಂದದಲಿ ಸ್ತ್ರೀಪುರುಷ | ರೊಂದೇ ವಿಧಾನದಲಿ |
ಬಂದ ಸಂಗತಿಯ ನೆರ | ದಂದ ವರ್ಣಿಸುವೆ || ೨೧ ||

**ಭಾಮಿನಿ**
ಅಬ್ಬರಿಸಿತೇನೆಂಬೆ ನಾರಿಯು |
ಗರ್ಭವನು ಧರಿಸಿದಳು ನೋಟದಿ |
ಯುಬ್ಬರಿಸಿತೇನೆಂಬೆ ಬಳಿಕೀಗೂರ್ವಿ ಜಗವೆಲ್ಲಾ ||
ಗರ್ಭಿಣಿಯಲುದ್ಭವಿಸೆ ತೇಜದ |
ಲಬ್ಬರದ ಪರಿವಾರನಿಕರವು |
ಸರ್ವಲೋಕಗಳೆಲ್ಲ ಬಳಿಕವರಿಬ್ಬರಿಂದಾಯ್ತು || ೨೨ ||

**ಸೌರಾಷ್ಟ್ರ - ತ್ರಿವುಡೆ**
ಜಾತವಾದವು ಮೂರು ಗುಣ ಪ್ರ |
ಖ್ಯಾತವಾದವು ಮೂರು ಹಂಕರ |
ಜಾತವಾದವು ತ್ರಿಗುಣ ತನ್ಮಯ | ಮಾತ್ರೆಯಿಂದ || ೨೩ ||

ಜಾತವಾಯಿತು ಪಂಚಭೂತಗ |
ಳೋತು ಬೆರಸುತ ಕರಣ ನಾಲ್ಕವು |
ರೀತಿಯಿಂದಲೆ ವಿಷಯ ದಶಜಡ | ಭೂತವೆಂದ || ೨೪ ||

ಇಂತು ಜಡರೂಪಾಗಿ ಮಾಯಾ |
ಭ್ರಾಂತಿ ಪ್ರಕೃತಿಯ ವಹಿಲದಿಂದಿರ |
ಲಂತರಂಗದ ಚೇತನಾಂಶ ಸು | ಸಂತತಿಯೊಳು || ೨೫ ||

ಅಂತರಾತುಮನೊಬ್ಬನೀ ಜಡ |
ಜಂತುಗಳ ಪರಿವಾರ ಮಧ್ಯದಿ |
ಸಂತತವು ಬೆಳಗುತ್ತ ಸತ್ವದಿ | ನಿಂತನಾಗ || ೨೬ ||

ಲೋಕಪಾಲಕನೊಬ್ಬನೇ ತ್ರೈ |
ಲೋಕಕಧಿಪತಿಯಾಗಿ ಇರುತಿರ |
ಲಾ ಕಮಲದಳನೇತ್ರೆ ಸಹಿತ ವಿ | ವೇಕದಿಂದ || ೨೭ ||

ಸೃಷ್ಟಿಪತಿ ತೇಜದಲಿ ಬೆಳಗಿದ |
ರಷ್ಟ ಕರ್ಣಿಕೆಯರುಗಳಿವರೀ |
ಸೃಷ್ಟಿವರಕಾಧಾರವಾದರು | ನಿಷ್ಠೆಯಿಂದ || ೨೮ ||

ಆ ಕಮಲಭವ ಮುಖ್ಯರಿಂ ಭೂ |
ಲೋಕ ನಿರ್ಮಿತವಾಗಿ ತೋರಿತು |
ನಾಕಪತಿಗಳು ಸಹಿತ ಬಳಿಕಾ | ನೇಕವಾಯ್ತು || ೨೯ ||

ಶ್ರೇಷ್ಠನಾಗಿರಲಿತ್ತ ಹಂಕರ |
ದುಷ್ಟಮತಿಯೆಂದೆಂಬ ನಾಮದೊ
ಳಟ್ಟಹಾಸದಿ ಮೆರೆದನವ ಬಲು | ಶ್ರೇಷ್ಠನೆಂದು || ೩೦ ||

ಅಷ್ಟಪುರಕಧಿಕಾರಿ ತಾನೆಂ |
ದಷ್ಟು ಪ್ರಜೆಪರಿವಾರ ಸಹಿತೀ |
ಪಟ್ಟಣವನಾಳಿದನು ಕೇಳ್ಳೈ | ದಿಟ್ಟತನದಿ || ೩೧ ||

**ಭಾಮಿನಿ**
ಅಷ್ಟಪುರಗಳ ಬೆಳಗುತಿಹ ಪರ |
ಶಿಷ್ಟ ವಸ್ತುವ ಮರೆದ ಕಾರಣ |
ಕಷ್ಟವೀ ಸುಖ ದುಃಖವದರಿಂ ಪುಟ್ಟಿ ಬೆಳೆದಿಹುದು ||
ಅಷ್ಟಪಾಶದಿ ಮಾಯವತಿ ತಾ |
ಕಟ್ಟಿ ಕೆಡಹಿದ ಬಂಧ ಹರಿಯದೆ |
ದುಷ್ಟಮತಿಯಾ ಪುರವನಾಳಿದ ಬಟ್ಟೆ ವರ್ಣಿಸುವೆ || ೩೨ ||

**ವಾರ್ಧಕ**
ಆರು ಸರಿ ತನಗೆ ಮಿಗಿಲಾರೆಂದು ಮನದೊಳತಿ |
ಭೂರಿ ಗರ್ವಗಳಿಂದ ಭಾರಿ ಮದ ತಲೆಗೇರಿ |
ಊರು ಪ್ರಜೆಪರಿವಾರಮಂ ಕರೆಸುತವರೊಡನೆ ಗಂಭೀರದೊಳಗೆಂದನು ||
ತೇರು ಕರಿ ತುರಗ ಬಲವ್ವೋರಂತೆ ಸಂದಣಿಸಿ |
ವೈರಿ ಬಲಕೆದುರಾಗಿ ದ್ವಾರದೊಳಗಿಹುದು ನುಡಿ |
ಮೀರಿ ನಡೆದರೆ ನಿಮಗೆ ಭಾರಿ ಶಿಕ್ಷಿಸುವೆನೆಂದಾರುಭಟೆಯೊಳಗಿರ್ದನು || ೩೩ ||

**ಶಂಕರಾಭರಣ - ರೂಪಕ**
ದುಷ್ಟಮತಿ ದುರಾಸೆಗೂಡುತಷ್ಟ ರೋಷದಿ |
ಅಷ್ಟಪುರವ ನಾಳೆ ಮಿಥ್ಯ ದೃಷ್ಟಿವೇಗದಿ || ೩೪ ||

ಮಾಯಮತಿಯು ವಿಕೃತಿಯೀರ್ವ ರಾಯರಿಂದಲೆ |
ಸ್ತ್ರೀಯರನ್ನು ಮದುವೆಯಾದ ಹೇಯವೆನ್ನದೆ || ೩೫ ||

ತಾಯಿತಂದೆಯೆನ್ನದವರ ನೋಯಿಸುತ್ತಲೆ |
ಘಾಯವಡದ ವ್ಯಾಘ್ರನಂತಸೂಯೆಗೊಳುತಲೆ || ೩೬ ||

ತನ್ನ ವೃತ್ತಿ ಧನವು ಕ್ಷೇತ್ರವೆನ್ನದೆಂಬನು |
ಬನ್ನಣೇಯ ಪೌರುಷಗಳ ವರ್ಣಿಸುವನು || ೩೭ ||

ಸತಿಸುತರುಗಳಾಪ್ತಬಂಧು ಹಿತದ ಜನರೊಳು |
ಅತಿಶಯದ ಮಮತೆಯಿಂದ ಜತೆಯ ಬಲದೊಳು || ೩೮ ||

ಸತತ ಸರ್ವ ವಿಷಯದೊಳಗೆ ಗತಿಯನೆನ್ನದೆ |
ಮಥಿಸೆ ಮನದ ಪೌರುಷಗಳ ಮಿತವನರಿಯದೆ || ೩೯ ||

ತನ್ನವರನು ಕಂಡು ಬಹಳ ಮನ್ನಿಸುವನು |
ಅನ್ಯರಿಂಗೆ ಮಾಳ್ಪನಾವ ಮನ್ನಣೆಯನು || ೪೦ ||

ಮೀರದೆನ್ನ ನುಡಿಯ ಕೇಳುತಿರುವದೆಂದನು |
ಬೇರೆ ಪೇಳ್ವನೂಳಿಗವನು ತೋರಿ ಬಲವನು || ೪೧ ||

**ಭಾಮಿನಿ**
ಇತ್ತ ಬಾರೈ ಮಗನೆ ಕುಳ್ಳಿರು |
ಚಿತ್ತಶುದ್ಧಿಗಳಿಂದ ಕೇಳೈ |
ಮತ್ತೆ ಸಾತ್ವಿಕ ಬಲಕೆ ತನ್ನಯ ಮೊತ್ತಬಲ ಸಹಿತ ||
ಸುತ್ತಮುತ್ತಲು ಚೂಣಿ ಬಲವದ |
ಕತ್ತರಿಸಲಾಕ್ಷಣಕೆ ಶಾಂತನು |
ಪೊತ್ತಿ ಮುಂದಡಗಟ್ಟುತೆಂದನು ಮತ್ತೆ ಶಾಂತನಿಗೆ || ೪೨ ||

**ಭೈರವಿ - ಮಟ್ಟೆ**

ಎಲವೊ ಶಾಂತ ಕೇಳೊ ನಿನ್ನ |
ಬಲುಮೆಯಲ್ಲ ಬಲ್ಲೆ ತಾಳು |
ಚೆಲುವ ಕಾಮದಸ್ತ್ರವೆನ್ನು | ತುಲಿವುತೆಚ್ಚನು || ೪೩ ||

ಎಚ್ಚ ಶರವ ನಡುವೆಯದರ |
ಕೊಚ್ಚಿ ವಿರತಿಯಾಸ್ತ್ರದೊಳಗೆ |
ಮುಚ್ಚುತೊಡನೆ ಶಮೆಯ ತಾಳ | ಲಚ್ಚರಿಯೊಳು || ೪೪ ||

ಭಳಿರೆ ವೀರನಹೆಯೊ ನಿನ್ನ |
ಬಲುಮೆಯನ್ನು ನೋಳ್ಪೆನೀಗ |
ವಲುಮೆ ಮೋಹದಸ್ತ್ರವಿದರ | ಗೆಲುವಡರಿದಲಾ || ೪೫ ||

ಸುಲಭವಲ್ಲವೇನೊ ಸತ್ಯ |
ದೊಲುಮೆಗದು ದಮಾಸ್ತ್ರದಿಂದ |
ವಲವನರಿತು ಕಡಿದೆ ನಿನ್ನ | ನೆಲೆಗೆ ಪೋಗೆಲಾ || ೪೬ ||

ನೆಲೆಗೆ ಪೋಗುವದಕೆ ದು |
ರ್ಬಲ ಮದಾಸ್ತ್ರವಿದರೊಳ್ ನಿನ್ನ |
ತಲೆಯ ಕೊಂಬೆನೆನುತ ಪೊಡೆದ | ನೆಲೆಯುಯಿಲ್ಲದೆ || ೪೭ ||

ಎಲ್ಲ ಮದಗಳಡಗಿ ಪೋಪು |
ದುಲ್ಲಸಿತದಂದಾಸಿನಾಸ್ತ್ರ |
ನಿಲ್ಲದೆಸೆಯಲಾಗ ಮದಗ | ಳೆಲ್ಲವಡಗಿತು || ೪೮ ||

ಕಂಡು ಖತಿಯ ತಾಳುತಾಗ |
ಲಂಡಲದು ದುರಾಶೆ ವೈರ |
ಗೊಂಡು ಮತ್ಸರಾಸ್ತ್ರವೆಸೆಯೆ | ಕಂಡನದರನು || ೪೯ ||

ಭಂಡ ಫಡ ಫಡೆಲವೊ ನಿನ್ನ |
ತುಂಡುಗಡಿವೆ ನೋಡೆನುತ್ತ |
ಕೊಂಡು ಪ್ರಾರ್ಥಿಸುತ ವಿವೇಕ | ತಂಡವೆಸೆದನು || ೫೦ ||

ಬರುವ ಶರಸಮೂಹವದಕೆ |
ಸರಿಯೆ ವಿಘ್ನ ಲೋಭದಸ್ತ್ರ |
ದುರುವಿಕಾರ ಭರದೊಳೆಸೆಯ | ಉರುಬಿ ಬಂದುದು || ೫೧ ||

ಊರಕೆ ಗುರಿಯ ನೋಡಿ ಬೋಧ |
ತರ ಮಹಾಸ್ತ್ರವಾ ಸುಧರ್ಮ |
ಶರದಿ ಪೊಳ್ಳುಗಳೆಯೆ ಲೋಭ | ವಿರದೆ ಮರಳಿತು || ೫೨ ||

ಶೂರತನಗಳೆಲ್ಲ ತೀರೆ |
ಕ್ರೂರವತಿ ಕಠೋರ ಹಿಂಸ |
ಭಾರಿ ಕ್ರೋಧದಸ್ತ್ರವೆಸೆಯ | ಲಾರುಭಟೆಯೊಳು || ೫೩ ||

ಭೋರುಗುಡಿಸುವಸ್ತ್ರ ಸಿಂಧು |
ಮೇರೆದಪ್ಪುವಂತೆ ಬರಲು |
ಹಾರಿಸುತ ನಿಧಾನದಿಂದ | ಮೌನವೆಸೆದನು || ೫೪ ||

ಮೌನವದುವೆ ಹೃದಯದೊಳಗೆ |
ವೈನದಿಂದ ಪೊಗಲು ನಿದ್ರೆ |
ಯಾನುವಂತೆ ಮರೆದನೆಲ್ಲ | ವೇನನೆಂಬೆನು || ೫೫ ||

**ವಚನ**

ಈ ಪ್ರಕಾರದಿಂದ ಮೈಮರೆದಾಭೂಪನ ಮನ ನಿವೃತ್ತಿ ಮಾರ್ಗದಿಂ ಸವಿಕಲ್ಪಕ್ಕೆ
ಬರಲೆಚ್ಚರುಗೊಳುತ್ತಲೇನೆಂದನೋಯೆಂದರೆ

**ಭಾಮಿನಿ**

ಯೇನು ಕಾರಣ ಬಂತು ತನಗೀ |
ಹಾನಿವೃದ್ಧಿಯು ಸುಖವು ದುಃಖಿಗ |
ಳೇನು ಕಾರಣ ದುಷ್ಟಮತಿ ತಾನಾದೆನೆಂದೆನುತ ||
ತಾನೆ ತನ್ನೊಳು ತಿಳಿದು ನೋಡಿದ |
ನಾನು ನಾನೆಂದೆಂಬ ಹಂಕರ |
ಭಾನುವರಿಯದ ಗೂಗೆಯಂದದಿ ಮಾಡಿದಕಟೆಂದ || ೫೬ ||

**ಸಾಂಗತ್ಯ - ರೂಪಕ**

ನೊಂದ ಮನದಿ ಹರಿ ಶರಣೆನ್ನಲಾಕ್ಷಣ |
ಬಂದುದ್ವೈರಾಗ್ಯ ಭೂಪತಿಗೆ ||
ಸಂದೇಹವಿಲ್ಲದೆ ಹಿಂದೆ ಮಾಡಿದ ಪುಣ್ಯ |
ಬಂದು ಕೂಡಿತಾಕ್ಷಣಕೆ || ೫೭ ||

ಇಷ್ಟು ದಿವಸ ಸತಿ ಸುತರೆಂಬ ಪಾಶದೊ |
ಳಷ್ಟಪುರವನಾಳಿ ಬರಿದೆ ||
ಕಷ್ಟಸಂಸಾರದಿ ನೊಂದೆನು ನಾನಿನ್ನು |
ಸುಟ್ಟು ಹೋಗಲಿ ಇನ್ನೀಪುರವು || ೫೮ ||

ಪುರಜನ ಪರಿಜನ ವೃತ್ತಿ ಕ್ಷೇತ್ರಗಳೆಲ್ಲ |
ಯರವಾಯಿತಿಂದೆನಗೆಲ್ಲ ||
ಗರುವದ ಹೆಮ್ಮೆರ ಹರೆಗಡಿದಂತಾದೆ |
ಬರಿದೆ ಪೌರುಷವ್ಯಾತಕಿನ್ನು || ೫೯ ||

ಹರಿಯ ಕಿಂಕರರನ್ನು ಮರೆ ಹೋಗುವುದೆ ಲೇಸು |
ಥರವಲ್ಲ ನಮಗಿನ್ನೀಪುರವು ||
ಹರ ಹರ ಶಿವ ಶಿವೆನ್ನಾರು ರಕ್ಷಿಪರೆಂದು |
ಧುರದ ವೈರಾಗ್ಯದೊಳೆಂದ || ೬೦ ||

**ಭಾಮಿನಿ**

ಕತ್ತಿಯನು ಹೊರಬಿಸುಟು ವರೆಯನು |
ಎತ್ತಿತೋರುವ ತೆರದಿ ಕಾಲಗೆ |
ತೆತ್ತಿಗನು ನಾನಾದೆ ಸದ್ಗುರು ಚರಣವನು ಮರೆದು ||
ಬಿತ್ತಿದೆನು ಬಹು ಕರ್ಮಬೀಜವ |
ನೆತ್ತಿದೆನು ಬಹು ಜನನ ಮೃತಿಯೊಳು |
ಸುತ್ತಿ ಬಳಲಿದೆ ರಕ್ಷಿಪರದಾರೆಂದು ಚಿಂತಿಸಿದ || ೬೧ ||

**ದ್ವಿಪದಿ**

ಪರಮ ವೈರಾಗ್ಯದಿಂದಿರುವ ಭೂಪತಿಗೆ |
ಗುರು ಪೇಳ್ದ ಮುಂದಾದ ಹದನ ಶಿಷ್ಯನಿಗೆ || ೬೨ ||

ಈ ಪರಿಯ ಚಿಂತೆಯಿಂದಿರುವ ಸಮಯದಲಿ |
ಶ್ರೀಪತಿಯನುಗ್ರಹದೊಳರಸನುದರದಲಿ || ೬೩ ||

ಜ್ಞಾನಮತಿಯೆಂದೆಂಬ ಸುತೆಯು ಜನಿಸಿದಳು |
ಸಾನುರಾಗದಲಿ ರಂಜಿಸುತಲಿ ಬೆಳಗಿದಳು || ೬೪ ||

ದುಷ್ಟಮತಿ ನಿಜಸುತೆಯ ನೋಡಿ ಹರುಷದಲಿ |
ಪಟ್ಟಣದ ಬೆಳಸಿರಿಯು ದೊರಕಿತಿಂದಿನಲಿ || ೬೫ ||

ತಾನು ಮಾಡಿದ ಪುಣ್ಯ ಕೈಗೂಡಿತೆಂದು |
ಜ್ಞಾನಮತಿ ತಂನೊಳಗೆ ಜನಿಸೆ ಮನತಂದು || ೬೬ ||

ಇಂದಿಗ್‌ಹೋಯಿತು ತನ್ನ ಪರಿಭವಗಳೆಂದು |
ಸಂದೇಹವ್ಯಾಕೆ ಗುರು ಬಲ್ಲನಿದನೆಂದು || ೬೭ ||

ಅಂದು ಮೊದಲಾಗಿ ರಕ್ಷಿಸಲು ದಿನದಿನದಿ |
ಇಂದುಮುಖಿಗೇಳ್ವರುಷ ತುಂಬಿತತಿಮುದದೀ || ೬೮ ||

ವರುಷವೇಳಾಯಿತೀ ಜ್ಞಾನಮತಿಗೆಂದು |
ನೆರೆ ವಿಚಾರಿಸೆ ತಕ್ಕ ವರನಾವುದೆಂದು || ೬೯ ||

ಒಂದು ದಿನ ಚಿಂತಿಸುತಲಿರಲು ಭೂಪತಿಯು |
ಬಂದನಲ್ಲಿಗೆ ನಾರದಾದಿ ಮಹ ಋಷಿಯು || ೭೦ ||

**ಭಾಮಿನಿ**

ಬರಲು ಮುನಿಪನ ಕಂಡು ಭೂಪತಿ |
ಕರವ ಪಿಡಿದೈತಂದು ತನ್ನಯ |
ಅರಮನೆಯ ಪರಿಯಂಕದೊಳು ಕುಳ್ಳಿರಿಸಿ ಹರುಷದಲಿ ||
ಪರಮಭಕ್ತಿಯೊಳೆರಗಿ ಮುನಿಪನ |
ಚರಣವನು ನೆರೆ ತೊಳದು ತೀರ್ಥವ |
ಶಿರದೊಳಗೆ ಧರಿಸುತ್ತ ಕೈ ಮುಗಿದೆಂದ ಮುನಿಪತಿಗೆ || ೭೧ ||

**ಮಧುಮಾಧವಿ - ಆದಿ**

ಯಾವ ಜನ್ಮದ ಪುಣ್ಯ ದೊರಕಿತೋ ಆದರಿಂದ |
ತಾವಾಗಿ ದಯಮಾಡಿದಿರಿ ಕೃಪೆಯಿಂದ ||
ನೀವೆಮ್ಮ ಗೃಹಕಾಗಿ ಬಂದ ಕಾರಣದಿಂದ |
ಪಾವನವಾಯ್ತೆಮ್ಮ ಜನ್ಮಸಂಬಂಧ || ೭೨ ||

ಧನ್ಯನಾದೆನು ಜ್ಞಾನಮತಿಯೆ ತಾ ಬಂದು |
ಎನ್ನೊಳುದ್ಭವಿಸೆ ಪ್ರೀತಿಯೊಳು ಮನತಂದು ||
ಕನ್ನಿಕೆಗೊರನಾವುದೊರೆಯಬೇಕೆಂದು |
ದೈನ್ಯದಿಂ ಕೇಳಲಾ ಮುನಿ ಪೇಳ್ದನೆಂದು || ೭೩ ||

ಅರಸ ಕೇಳೈ ಜ್ಞಾನಮತಿ ನೇಮದಿಂದ |
ಹರುಷದಿ ಸತಿಸಹಿತಲೆ ಕ್ರಮದಿಂದ ||
ಪರಮಪುರುಷಗಿತ್ತು ಗತಿಯಾಗು ಯೆಂದ |
ವರಮುನೀಂದ್ರನು ಪೇಳಿ ಪೋದನಲ್ಲಿಂದ || ೭೪ ||

**ಭಾಮಿನಿ**

ಪರಮ ಋಷಿಯನುಪಮದ ವಾಕ್ಯದ |
ಲೊರೆದವುಪದೇಶವನು ಕೇಳುತ |
ಕರೆಸಿ ವಿಪ್ರೋತ್ತಮರಮುಖದಿಂದೆನ್ನ ಕುವರಿಯನು ||
ಶರಣ ಜನರ ಸಮೂಹ ಮಧ್ಯದೊ |
ಳಿರದೆಯೇಕೋಧ್ಯಾನದಿಂದಲಿ |
ಪರಮಪುರುಷನಿಗೀವೆನೆಂದೆನುತರಸ ನೇಮಿಸಿದ || ೭೫ ||

**ಕೇದಾರಗೌಳ - ಅಷ್ಟ**

ಇಷ್ಟು ದಿವಸ ದುಷ್ಟಮತಿಯೆಂಬ ನಾಮದೊ |
ಳಷ್ಟ ಪುರವನಾಳಿದೆ ||
ದುಷ್ಟರ ಕೂಡಿ ಯುದ್ಧವ ಮಾಡಿ ಕೈ ಸೋತ |
ಭ್ರಷ್ಟನಾದೆನು ರಣದಿ || ೭೬ ||

ಪುಟ್ಟಿತು ವೈರಾಗ್ಯದೊಳಗೆ ಚಿಂತಿಸುತಿರ |
ಲಷ್ಟರೊಳಗೆ ಸುತೆಯು ||
ಹುಟ್ಟಿದಳೆಂದು ಸಂತಸದಿಂದ ಕರೆಸೆ ಚ ||
ತುಷ್ಟಯುಪಾಧ್ಯರನು || ೭೭ ||

ಶ್ರೇಷ್ಠ ಗದ್ದುಗೆ ಮೇಲೆ ಕುಳ್ಳಿರಿಸುತ ಬಲು |
ನಿಷ್ಠೆಯೊಳುಪಚರಿಸಿ ||
ಸೃಷ್ಟೀಶ ಕೈಯ್ಯ ಮುಗಿದು ತನ್ನ ಮನಸಿನ |
ಭೀಷ್ಟವ ವರ್ಣಿಸಿದ || ೭೮ ||

ಶಿಷ್ಯರೆಲ್ಲರು ಕೇಳಿ ಶುಭಲಗ್ನ ಸಮಯವ |
ಗುಟ್ಟಿಲಿ ಗಣಿಸಿದರು ||
ಷಷ್ಠಿಯ ಮರು ದಿವಸವೆ ಮಾಡಬೇಕೆನು |
ತಿಟ್ಟರು ಲಗ್ನವನು || ೭೯ ||

ಮೆರೆವ ವೈಶಾಖದಿ ಶುದ್ಧ ಸಪ್ತಮಿ ಗುರು |
ವಾರದ ದಿವಸದಲಿ ||
ಸರಸಿಜಸಖನುದಿಸಿದ ಯೇಳು ಘಳಿಗೆಯ |
ಲ್ಲಿರುವದು ಶುಭಮುಹೂರ್ತ || ೮೦ ||

ನೆರೆದ ವಿಪ್ರರು ನೋಡಿ ಸನ್ಮತಿ ತನುಜೆಯ |
ಪರಮ ಪುರುಷಗೀಯುವ ||
ಗುರುದೃಷ್ಟಿ ಲಗ್ನ ನಿಶ್ಚಯವೆನುತೆಲ್ಲವ |
ರೊರೆಯೆ ಕೇಳುತ ಮುದದಿ || ೮೧ ||

**ವಾರ್ಧಕ**

ವಿಪ್ರಮುಖದಿಂದ ಶುಭಲಗ್ನಮಂ ನಿಶ್ಚಯಿಸಿ |
ಕ್ಷಿಪ್ರದಿಂ ಸರ್ವ ಸನ್ಮತದಿಂದ ತನುಜೆಯ |
ಮ್ಮಪ್ರತಿಮ ಪರಮ ಪುರುಷನಿಗೀವೆನೆನೆ ಕೇಳಿ ವಪ್ಪಿಕೊಳೆ ಬಂಧು ಜನರು ||
ಸುಪ್ರೇಮದಿಂ ಪುರವ ಶೃಂಗರಿಸಿ ಗುಡಿ ತೋರ |
ಣಪ್ರತಿಮ ಕುರುಜು ಮೇರುವೆ ಮೇಲುಗಟ್ಟುಗಳ |
ನುಪ್ಪರದಿ ರಚಿಸಬೇಕೆನುತ ಸುಮತಿಯ ತಾಳಲೊಪ್ಪಿ ಸನ್ನುತಿಗೈದರು || ೮೨ ||

**ಸೌರಾಷ್ಟ್ರ - ತ್ರಿವುಡೆ**

ಸನುಮತಿಯ ನುಡಿಗೇಳುತಾಕ್ಷಣ |
ಕನುಕರಿಸಿ ಬೀಳ್ಕೊಂಡು ಭೃತ್ಯರು |
ಮನದ ಸತ್ವಗಳಿಂದ ತಮ್ಮೊಳು | ವಿನಯಗೂಡಿ || ೮೩ ||

ವನಜ ಸಖನುದಯದಲಿ ಡಂಗುರ |
ಘನತರದಿ ಮೊಳಗಿಸಲು ಪುರವನು |
ದಿನದಿನಕೆ ಶೃಂಗಾರ ಮಾಡುವ | ದನಿತನೊರವೆ || ೮೪ ||

ಅಷ್ಟಪುರಪತಿ ಸನುಮತಿಯ ಚರ |
ರಷ್ಟು ಮಂದಿಯು ಕೂಡಿ ಘನದೊಳು |
ಪಟ್ಟಣವ ಶೃಂಗರಿಸೆ ತೊಡಗಿದ | ಗುಟ್ಟು ಪೇಳ್ವೆ || ೮೫ ||

ಬಲ್ಲವರ ಮುಖದಿಂದ ವಿಧಿಗಳ |
ನೆಲ್ಲವರು ಕೇಳುತ್ತ ತಮ್ಮೊಳು |
ನಿಲ್ಲದೇ ವಿಲಯಗಳ ಮಾಡೆ ಸ | ಮುಲ್ಲಸದೊಳು || ೮೬ ||

ಕುಂಡಲಿಯ ಸುತ್ತುಗಳ ಸಡಿಲಿಸು |
ತಂಡಲೆದು ದಳದಳವ ಶೋಧಿಸಿ |
ಪುಂಡರೀಕದ ನಾಳದೊಳ ಪೊಗು | ತುಂಡು ಸುಖದಿ || ೮೭ ||

**ದ್ವಿಪದಿ**

ಅರುವಿನಸಿಯಿಂದ ನೆಲಗಟ್ಟನೊರೆಸಿದರು |
ದುರುವಿಕಾರದ ಕಲ್ಲ ದೂರ ಹೊರಿಸಿದರು || ೮೮ ||

ಅಕ್ರೋಧವಾಗಿರುವ ತಕ್ಷಕರು ಬಂದು |
ಮಿಕ್ಕು ಬೆಳೆದಾರು ವೃಕ್ಷವ ಕಡಿದು ತಂದು || ೮೯ ||

ಕೆಲಸಗತಿಯಿಂದ ತಿರುಪುಗಳಳಿದು ಮುದದಿ |
ಅಲಸದೇ ಕಡಿದು ಕೆತ್ತಿದರು ದಿನದಿನದಿ || ೯೦ ||

ಆವಾವ ಗತಿಗಳಲಿ ಕಂಭಗಳ ನಿಲಿಸಿ |
ಸಾವಧಾನದಿ ಸುತ್ತ ಚಪ್ಪರವ ರಚಿಸಿ || ೯೧ ||

ಕಂಜನಾಭನ ಮತವ ಗುಡಿಕಟ್ಟಿದವರು |
ರಂಜಿಸುವ ಪಟ್ಟೆ ಮೇಲ್ಗಟ್ಟು ಕಟ್ಟಿದರು || ೯೨ ||

ಅನುಭವದ ಕುರಜು ಮೇರುವೆಯಲಂಕರಿಸಿ |
ಮನವೊಲಿದು ಮಕರತೋರಣಗಳನು ರಚಿಸಿ || ೯೩ ||

ಸುತ್ತ ತಿರುಗುವ ನಾಲ್ಕು ಅಶ್ವ ಶೃಂಗರಿಸೆ |
ವಸ್ತುಲಕ್ಷಣದ ಪುರಬಾಹ್ಯೆಯೊಳು ನಿಲಿಸೆ || ೯೪ ||

ಅಷ್ಟಮದ ಕರಿಯ ಸೊಕ್ಕಷ್ಟನಿಳುಹಿದರು |
ಪಟ್ಟಣದ ದ್ವಾರದಲಿ ಕಟ್ಟಿ ನಿಲಿಸಿದರು || ೯೫ ||

ಸಂಚಿತದ ಮೂಲ ಸಂಜ್ಞೆಯನೆಲ್ಲ ತಿಳಿಸಿ |
ಮುಂಚೈವ ಹರಿಕಾರರೊಳ ಹೊರಗೆ ನಿಲಿಸಿ || ೯೬ ||

ಎತ್ತ ನೋಡಿದರು ನವರತ್ನ ಮಣಿಪುರವು |
ಮತ್ತದರ ಮೇಲೇಳು ನೆಲೆಯ ಗೋಪುರವು || ೯೭ ||

ವರ್ಣದಿಂ ನಿರ್ಮಲದ ಭೋಜನದ ಶಾಲೆ |
ಚಿನ್ಮಯದಿ ರಂಜಿಸುವವುಪ್ಪರಿಗೆ ಮೇಲೆ || ೯೮ ||

**ಭಾಮಿನಿ**
ತರಣಿ ಶಶಿ ವಹ್ನಿಗಳ ಕೋಟಿಯ |
ತೆರದಿ ಬೆಳಗುತ್ತಿರಲು ಪುರದಲಿ |
ಧರಣಿಪತಿ ನೆರೆನೋಡಿ ಕರೆಸಿದ ಸರ್ವ ಭೃತ್ಯರನು ||
ಭರದಲವರನು ಮನ್ನಿಸುತ ಮನ |
ದಿರವ ಸಲಿಸಿದಿರಿನ್ನು ಬಳಿಕೀ |
ತೆರದಲೆನ್ನಯ ಕಾರ್ಯಕೊದಗಿರಬೇಕು ನೀವೆಂದ || ೯೯ ||

**ಕಾಂಭೋದಿ - ಝಂಪೆ**
ಅತಿ ಹರುಷದಲಿ ಭೃತ್ಯ | ತತಿಯೊಡನೆ ಬಳಿಕ ಸ |
ನ್ಮತಿ ಪೇಳ್ದನವರಿಗೂಳಿಗವ ||
ವ್ರತವರಿವುತೆಲ್ಲವರು | ಮತಿಯೊಳು ವಿವೇಕದಿಂ |
ಶ್ರುತಿ ವಿಧಾನಗಳ ನೆರೆ ತಿಳಿದು || ೧೦೦ ||

ಕ್ಷಿತಿಯೊಳಿಹ ಸರ್ವಸ | ನ್ನುತ ಪದಾರ್ಥಗಳ ಬಲು |
ಮಿತಿ ಇಲ್ಲದೊಡವೆ ವಸ್ತುಗಳ ||
ಜತೆಗೊಳಿಸುತಲೆ ನಿಮ್ಮ | ಪಿತರು ಸುತರುಗಳೆನ್ನ |
ಗತಿಗೆ ಒದಗುವದೆಂದನಾಗ || ೧೦೧ ||

ಶುಭವಾಗಿರುವ ಮಹ | ದಭ್ರಮಂಗಲದೊಸ್ತ್ರ |
ಕರ್ಬುರದ ದಿವ್ಯ ವಸ್ತುಗಳ ||
ನಿರ್ಭರದಿ ಸಂಗ್ರಹಿಸು | ತೊಬ್ಬೊಬ್ಬರೆನ್ನಮರ |
ಗರ್ಭಸೇರುವದೆಂದನಾಗ || ೧೦೨ ||

**ವಾರ್ಧಕ**
ಇಂತೆಂದು ಊಳಿಗವ ಪೇಳಿ ಭೃತ್ಯರನೆಲ್ಲ |
ಸಂತೈಸಿ ಬೀಳ್ಕೊಟ್ಟು ಬಳಿಕ ಸನ್ಮತಿ ನೃಪತಿ |
ಯಂತರಂಗದಲಿ ಗೃಹ ಪರಿಶುದ್ಧಿಗಿಹ ತನ್ನ ಕಾಂತೆಯಂ ಕರೆದು ಮುದದಿ ||
ಕಂತುಜನಕನ ದಿವ್ಯ ನಾಮವಂ ಕೊಂಡಾಡಿ |
ಸಂತಸದಿ ಮನೆವಾರ್ತೆಯಂ ಮಾಡಿ ಕರಣಗಳ |
ಮುಂತಿರ್ಪ ನೀತಿಶಾಸ್ತ್ರಾಂಗಮಂ ಸಂಗ್ರಹಿಸಿ ನಿಂತು ನಡೆಸುವದೆಂದನು || ೧೦೩ ||

**ಭಾಮಿನಿ**
ರಾಜ ನೀತಿಯ ಪೇಳಿ ಸರ್ವರ |
ರಾಜಿಯಲಿ ನಿಲಿಸುತ್ತ ಬಳಿಕಾ |
ಶ್ರೀ ಜಗನ್ಮಂಗಲ ಮುಹೂರ್ತಕೆ ರಾಜ ಋಷಿವರರು ||
ರಾಜ ವಿದ್ಯದಲಿರುವ ರಾಯರು |
ರಾಜಪಂಡಿತರಾಮಹದ್ಗುರು |
ರಾಜರುತ್ಸಹಕೊದಗಬೇಕೆಂದೆನುತ ಕಳುಹಿಸಿದ || ೧೦೪ ||

**ನವರೋಜು - ಅಷ್ಟ**

ಮಂಗಳೊಸಗೆ ರಚಿಸಿದರು | ಜಯ |
ಮಂಗಳ ರವದಿ ಡಂಗುರ ಹೊಡೆಸಿದರು ||
ಸಂಗರಹಿತ ಪರಮಾತ್ಮನುತ್ಸವವೆನ್ನು |
ತ್ತಂಗಡಂಗಡಿಯೊಳು ಡಂಗುರ ಸಾರುತ್ತ || ಮಂಗಳಂ || ಪ ||
ಇತ್ತ ಸನ್ಮತಿಯೆಂಬ ನೃಪನು | ಒಳ್ಳೇ |
ಉತ್ತಮ ಹಿರೆಯವರನು ಕರೆಸಿದನು ||
ಮತ್ತದರೊರ್ತಮಾನವ ಪೇಳೆ ಬಳಿಕವ |
ರತ್ಯಂತ ಹರುಷದಿಂದುಪಚರಿಸಿದನು || ಮಂಗಳಂ || ೧೦೫ ||

ಲೇಸಾಗಿ ಸಖಿಯರು ಕೂಡಿ | ಹರಿ |
ವಾಸುದೇವನ ದಿವ್ಯ ನಾಮವ ಪಾಡಿ ||
ಸಾಸಿರವುಪನಿಷದ್ದೇವಿಯರೊಡಗೂಡಿ |
ವಾಸನೆಯೆರೆದರಸಿನ ಪುಡಿಮಾಡಿ || ಮಂಗಳಂ || ೧೦೬ ||

ಸೊಂಪಿನಬಲೆಯರೆಲ್ಲವರು | ಬಹ |
ಳಿಂಪಾಗುತ್ತಕ್ಷತೆಗಳ ಕಲಸಿದರು ||
ಸಂಪ್ರೀತಿಯಲಿ ಪಾಡುತ ವಿಘ್ನೇಶನ |
ದಂಪತಿಗಳಿಗರಸಿನ ತಿವುರಿದರು || ಮಂಗಳಂ || ೧೦೭ ||

ಮೀನಲಲನೆಯರೆಲ್ಲವರು | ನೆರ |
ದಾನಂದವಾದ ಪನ್ನೀರನೆರೆದರು ||
ಸಾನುರಾಗದಿ ಕೂಡಿ ಸಖಿಯರೀರ್ವರು ಸಂವಿ |
ರಾಗದಿಂದಾರತಿಗಳ ಬೆಳಗಿದರು || ಮಂಗಳಂ || ೧೦೮ ||

**ಭಾಮಿನಿ**

ಸರಸಿಜಾಕ್ಷಿಯರೆಲ್ಲ ದಂಪತಿ |
ಗರುಸಿನೆಣ್ಣೆಯ ತಿರುವಿಯೆರೆಯಲು |
ಸರುವರಿಂಗಾನಂದವಾಯಿತು ಕರೆದು ಮಂತ್ರಿಗಳ ||
ಅರಸಿನೋಲೆಯ ಬರೆಸಿ ಸನ್ಮತಿ |
ಕರೆಸಿ ದಶಲಕ್ಷಣದುಪಾಧ್ಯರ |
ವೆರಸಿ ಮಂಟಪವನ್ನು ರಚಿಸಿದ ಪರಿಯ ವರ್ಣಿಸುವೆ || ೧೦೯ ||

**ದ್ವಿಪದಿ**

ಷಷ್ಟಿ ದಿವಸದಲಿ ನೆರೆದಷ್ಟು ಜನರಿಂದ |
ಕಟ್ಟಿದರು ಮಂಟಪವ ನಟ್ಟ ನಡುಗೊಂದ || ೧೧೦ ||

ತತ್ವದ ವಿಚಾರದೊಳಸುತ್ತನಳಿದವರು |
ಮತ್ತದಕೆ ಸಮ ಚೌಕವಿತ್ತು ಕೂಡಿದರು || ೧೧೧ ||

ತಂಪಾದ ಭೂಮಿಯರ ನುಂಪುಗಳ ಮಾಡಿ |
ಸಂಪಾದ ಕೂಡಿದರು ಮುಂಪದಕೆ ಜೋಡಿ || ೧೧೨ ||

ಬಲಿಯಾಗಿ ವಜ್ರಕಂಭಗಳು ನಾಲ್ಕದಕೆ |
ನೆಲೆಯಾರು ಮಂಟಪಕೆ ಮೇಲ್ಕಲಶ ತುದಿಗೆ || ೧೧೩ ||

ಗೊಂಡ್ಯಗಳ ರಚಿಸೆ ಸಮಗೊಂಡು ಮೂಲೆಯಲಿ |
ಪೆಂಡೆ ಮುತ್ತಿನ ಝುಲ್ಲೆ ತಂಡ ತಂಡದಲಿ || ೧೧೪ ||

ರಮಣೀಯವಾಗಿರುವ ಕಮಲ ಪುಷ್ಪಗಳು |
ಅಮಮ ಶೋಭಿಸುವ ಮಾನವ ಸಮೂಹಗಳು || ೧೧೫ ||

ಈ ರೀತಿ ಮಂಟಪವ ಸೇರಿ ರಚಿಸಿದರು |
ಚಾರುತರಗುರು ಕಲಶವೇರುತಿರಿಸಿದರು || ೧೧೬ ||

ಇಷ್ಟಾದ ಮೇಲೆ ಪುರವಷ್ಟು ಬೆಳಗಿದವು |
ಅಷ್ಟುಮಾ ವಾದ್ಯಗಳು ಮುಟ್ಟಿ ಮೊಳಗಿದವು || ೧೧೭ ||

ಅರ್ತಿಯದ ನೋಡುತಿಹ ಮೊತ್ತಜನ ಮನಕೆ |
ಮುಕ್ತಿಮಂಟಪವೆಂದು ಬಿತ್ತರಿಪರದಕೆ || ೧೧೮ ||

ವಿಸ್ತರಿಸಲಳವಲ್ಲ ಸ್ವಸ್ಥಾನ ಸಿರಿಯ |
ವಸ್ತು ಸದ್ಗುರು ಬಲ್ಲ ಸ್ವಸ್ತಿಸುಂದರಿಯ || ೧೧೯ ||

**ವಾರ್ಧಕ**

ಆರೂಢಲಕ್ಷಣದಲಾರು ನೆಲೆ ಮಂಟಪವ |
ವೋರಂತೆ ಶೃಂಗರಿಸೆ ಮೇರುವಿನ ತೆರನಂತೆ |
ಸೂರಿಯರ ಕೋಟಿಗಿಮ್ಮಡಿಯಾಗಿ ಬೆಳಗುತಿರೆ ವಾರಿಧಿಯು ಮೊರೆವ ತೆರದಿ ||
ಸಾರಿ ಕೂಗುವ ಕಹಳೆ ಭೋರೆಂಬ ಬಹುವಾದ್ಯ |
ಯೇರುವಡದಿರು ವೀಣೆ ತಂತಿ ತುತ್ತುರಿ ಕೊಳಲು |
ಮೀರೆ ಧ್ವನಿಚಿದ್ಗಣದಿ ಸೂರಿಯನೆ ಬೆಳಗಲಾ ಗುರು ಪುರದ ವಳೆಯ ತುಂಬ || ೧೨೦ ||

**ಭಾಮಿನಿ**

ಮರುದಿವಸದುದಯದಲಿ ಸರ್ವರು |
ನೆರೆದು ಬಹು ಸಂತೋಷದಿಂದಲೆ |
ಪರಮಪುರುಷನ ಮದುವೆಗಾರಂಭವನು ಮಾಡಿದರು ||
ಗುರುವುಪಾಧ್ಯರು ಶಾಸ್ತ್ರವಿಧಿಯಿಂ |
ವರಮಹಾಗಣಪತಿಯ ಪೂಜಿಸಿ |
ಪರಮ ಪುರುಷನಿಗಸಿಪದದ ಪಟ್ಟಾಳಿ ಶೃಂಗರಿಸೆ || ೧೨೧ ||

**ಮಧ್ಯಮಾವತಿ - ಏಕ**

ಎಣ್ಣೆಮಜ್ಜನವ ಮಾಡಿ | ಬೇಗದಿ ಶ್ರುತಿ |
ಕನ್ನೆಯರೆಲ್ಲ ಕೂಡಿ ||
ಪುಣ್ಯಪುರುಷಗೆ ವೇದಾಂಗ ವಿಧಿಗಳಿಂದ |
ಪುಣ್ಯವಾರ್ಚನೆಯು ಮಾಡಿದರು ಶೀಘ್ರದಲಿ || ೧೨೨ ||

ವಿದ್ಯೆಪಾಲಕರು ಕೂಡಿ | ಕ್ರಮಗಳನ್ನು |
ವಿಧ್ಯುಕ್ತದಿಂದ ಮಾಡಿ ||
ಶುದ್ಧಾಗಿ ಹಸ್ತಿಕ ತಿದ್ದಿ ಪನ್ನೆಯ ಬೇಗ |
ನದ್ವೈತರೂಪಗೆ ಮಜ್ಜನವೆಸಗುತ || ೧೨೩ ||

ವಿದ್ಯಾಂಗನೆಯರಾಗ | ವಸ್ತ್ರಗಳಿಂದ |
ಲುದ್ದಿ ಮೈವರೆಸಿ ಬೇಗ ||
ಅದ್ವೈತವಾದ ದೇವಾಂಗ ಪೊರಸಿ ಗುರು |
ಮಧ್ಯದ ಸಭೆಯೊಳು ಕುಳ್ಳಿರಿಸಿದರು || ೧೨೪ ||

ಮುಂದಲೆ ನೇವರಿಸಿ | ಪಣೆಗೆ ನೆರೆ |
ಗಂಧಾಕ್ಷತೆಯನಿಡಿಸಿ ||
ಅಂದವಾಗಿರುವಂತರಾತ್ಮಗೆ ಬಹು ವಿಧ |
ಛಂದಸ್ಸಿನಾಭರಣವ ತೊಡಿಸಿದರು || ೧೨೫ ||

ಪಂಚರತ್ನದಿ ಮೆರೆವ | ವಿವಿಧ ಪ್ರ |
ಪಂಚದಿ ರಂಜಿಸುವ ||
ಪಂಚಮುಖಿಯರಕ್ಷತೆಯಿಟ್ಟು ನೊಸಲಿಗೆ |
ಪಂಚಾಕ್ಷರಿಯ ಬಾಸಿಗವ ಕಟ್ಟಿದರು || ೧೨೬ ||

ಸೋಮವಾರ್ತನೆಯ ಮಾಡಿ | ವೇದಿಕೆಯೊಳು |
ಸಂಯಮದಗ್ನಿ ಹೂಡಿ ||
ಕಾಮ್ಯಾರ್ಥದ ಘೃತಹೋಮವ ಮಾಡಿ ಸು |
ಕ್ಷೇಮದಿ ಕಾಶಿಯಾತ್ರೆಗೆ ತೆರಳಿದನು || ೧೨೭ ||

**ಭಾಮಿನಿ**
ನಿತ್ಯನವ್ಯಯನಾತ್ಮನಕ್ರಿಯ |
ಗೆತ್ತಣದ ಸಮವಾರ್ತೆಯೆಂದಡೆ |
ಭಕ್ತರಾಪರಮಾತ್ಮಪದವನು ಪಡೆಯಲೋಸುಗರ ||
ಸತ್ಯರೂಪನು ಪ್ರಕೃತಿ ರೂಪಿಗೆ |
ಪ್ರತ್ಯಗಾತುಮನಾದ ಕಾರಣ |
ದತ್ಯಧಿಕ ಸ್ತುತಿಮಾಡಿ ಪೊಗಳಿದರ್ ಹೊರತು ಬೇರಿಲ್ಲ || ೧೨೮ ||

**ಸೌರಾಷ್ಟ್ರ - ತ್ರಿವುಡೆ**
ಪರಮ ಪುರುಷನು ಕಾಶಿಯಾತ್ರೆಗೆ |
ತೆರಳುವನು ತಾನೆಂಬ ವಾರ್ತೆಯ |
ನಿರದೆ ಕೇಳುತ ಬಂದು ಸನ್ಮತಿ | ತಡೆದನಾಗ || ೧೨೯ ||

ವರತನುಜೆ ನಿನಗೀವೆನಾ ಸಹ |
ತೆರಳುವುದು ಸಕುಟುಂಬ ಯುಕ್ತದಿ |
ಪರಮ ಕಾಶಿಯ ಯಾತ್ರೆಗೆಂದೆನೆ | ತೊರೆದನಾಗ || ೧೩೦ ||

ಸೋಮವಾರ್ತನೆ ಗಂಟನಿಳುಹ |
ಲ್ಕಾಮಹಾಬ್ರಾಹ್ಮಣ ಸುಭೋಜನ |
ನೇಮದಿಂದಲೆ ವೀಳ್ಯ ವುಡುಗರೆ | ಸಾಮಗೊಡುತ || ೧೩೧ ||

ತಾ ಮನದಿ ಹರುಷವನು ತಾಳುತ |
ಶ್ರೀಮನೋರಮ ನದಿಯ ಸ್ಮರಿಸುತ |
ಸೌಮನಸ್ಯದಿ ಬಂದ ತನ್ಮನ | ಧಾಮಕಿರದೆ || ೧೩೨ ||

**ಭಾಮಿನಿ**
ಬಂದು ಸನ್ಮತಿ ತನ್ನ ಮಂದಿರ |
ಕಂದು ಶ್ರೀಹರಿಧ್ಯಾನ ಮಾಡುತ |
ಲೊಂದೆ ಬುದ್ಧಿಗಳಿಂದ ವಿಘ್ನೇಶ್ವರನ ಪೂಜಿಸುತ ||
ನಿಂದು ಕೈ ಮುಗಿದೆನ್ನ ಕಾರ್ಯವ |
ತಂದೆ ನಿರ್ವಿಘ್ನದಲಿ ಸಾಗಿಸ |
ಲೆಂದು ಗುರು ನೇಮದಲಿ ನಾಂದಿಯ ವ್ರತವ ಕೈಕೊಂಡ || ೧೩೩ ||

**ಸಾಂಗತ್ಯ - ರೂಪಕ**
ನಾಂದಿಯ ವ್ರತವ ಕೈಕೊಂಡು ಸನ್ಮತಿಯು ಸಾ |
ನಂದನೆಯನು ಕರೆತಂದು ||
ಸಂಧಿಯಾಗಲು ಪರಮಾತ್ಮನು ಕಳುಹಿದ |
ಬಂದಿ ತಾಳಿಯನಿಡಿಸಿದರು || ೧೩೪ ||

ಅಂಗನೆಯರು ನೆರೆದರಿಸಿನೆಣ್ಣೆಯ ಮಾಡಿ |
ಮಂಗಳ ಧವಳವ ಪಾಡಿ ||
ಹೊಂಗಲಶದಿ ನೀರನೆರೆದು ಆನಂದದಿ |
ಮಂಗಲೋಸ್ತ್ರವನುಡಿಸಿದರು || ೧೩೫ ||

ವಿದ್ಯಾಂಗನೆಯರೆಲ್ಲರದ್ವೈತಾಭರಣವ |
ಭದ್ರವಾಗಿಯೆ ತೊಡಿಸಿದರು ||
ಸದ್ಗುರುವಿನ ಕೃಪಾಮುದ್ರೆಯನಿಟ್ಟರು |
ಮುದ್ದು ಮುಖದ ಜ್ಞಾನಮತಿಗೆ || ೧೩೬ ||

ಜ್ಞಾನಮತಿಯ ಸರ್ವಾಂಗಕಾಭರಣವಾ |
ನ್ಯೂನವಿಲ್ಲದೆ ತೊಡಿಸಿದರು ||
ಮಾನಿನಿಮಣಿಯರು ಮಂಗಲಗೀತೆಯ|
ಆನಂದದಿಂದ ಪಾಡಿದರು || ೧೩೭ ||

**ವಚನ**
ಈ ಪ್ರಕಾರದಿಂದ ಜ್ಞಾನಮತಿಯನು ಕ್ಷಿಪ್ರದಿಂ ಶೃಂಗರಿಸುತಿರಲಾಗ ಪ್ರಮೇಯನ ಮದುವೆಗೈತಂದವರ ವರ್ಣಿಸುವೆ

**ಸೌರಾಷ್ಟ್ರ - ಏಕ**
ಆರಂಭದೊಳಗಧಿಕಾರದುಪಾಧ್ಯರು | ಬಂದರಾಗ ||
ವೋರಂತೆ ಸರ್ವ ವಿಚಾರದುಪಾಧ್ಯರು | ಬಂದರಾಗ || ೧೩೮ ||

ವೈರಾಗ್ಯದಲಿ ಸುಖೇಚ್ಛೆಯ ನಿಷ್ಠರು | ಬಂದರಾಗ ||
ತುರ್ಯದಿಂದಾತ್ಮ ವಿವೇಕದೊಳಿಷ್ಟರು | ಬಂದರಾಗ || ೧೩೯ ||

ವಿದ್ಯ ಶಾಸ್ತ್ರವ ಬಲ್ಲ ಬುದ್ಧಿವಂತರುಯೆಲ್ಲ | ಬಂದರಾಗ ||
ಸದ್ಗುರುವಿನ ಕೃಪೆ ಸಿದ್ಧಿಯಾದವರೆಲ್ಲ | ಬಂದರಾಗ || ೧೪೦ ||

ಆನೆ ಕುದುರೆಯನೇರಿ ಸೇನಾಧಿಪತಿಗಳು | ಬಂದರಾಗ ||
ಯಾನವೇರಿದ ರಾಜರಾ ಧನುರ್ಧರರೆಲ್ಲ | ಬಂದರಾಗ || ೧೪೧ ||

ಭಕ್ತಿಯೊಳಿರುವ ವಿರಕ್ತರೆಲ್ಲರು ಸಹ | ಬಂದರಾಗ ||
ಮುಕ್ತಿಮಾರ್ಗವನಾಪೇಕ್ಷಿಸುವವರೆಲ್ಲ | ಬಂದರಾಗ || ೧೪೨ ||

ಆ ಮದೇಂದ್ರಿಯಗಳ ಹೋಮಿಸಿದವರೆಲ್ಲ | ಬಂದರಾಗ ||
ಪ್ರೇಮದಿಂದಾನಂದ ಭೂಮಿಕೆಯರೆಲ್ಲ | ಬಂದರಾಗ || ೧೪೩ ||

(ಆಸೆಯ ಕಡಲನ್ನು ಈಸಿದಾಂಟಿದವರೆಲ್ಲ | ಬಂದರಾಗ ||)
ವಾಸನಕ್ಷಯವಾದ ಭೂಸುರರೆಲ್ಲರು | ಬಂದರಾಗ || ೧೪೪ ||

ಒಂದೆ ಮಾರ್ಗವ ಹಿಡಿದೊಂದಾಗುತೆಲ್ಲರು | ಬಂದರಾಗ ||
ಸಂಧಿಸಿರುವ ತುರ್ಯಾನಂದಗಾಮಿಗಳೆಲ್ಲ | ಬಂದರಾಗ || ೧೪೫ ||

ಸಾಮಗಾನವ ಬಲ್ಲ ಸೋಮಪಾನಿಗಳೆಲ್ಲ | ಬಂದರಾಗ ||
ಸೀಮೆಗಧಿಪನಾದ ಸನ್ಮತಿ ಗೃಹಕಾಗಿ | ಬಂದರಾಗ || ೧೪೬ ||

**ವಾರ್ಧಕ**
ಈ ರೀತಿಯಿಂದ ಸರ್ವರು ಬರಲು ಸನ್ಮತಿಯು |
ದಾರಸಂತಸದಿಂದಿದಿರ್ಗೊಂಡು ಕರೆದು ತಂ |
ದೇರಿಸುವ ಭದ್ರಾಸನದ ಮೇಲೆ ಕುಳ್ಳಿರಿಸಿ ಪೂಜಿಸಿದ ನ್ಯಾಯವರಿದು ||
ತೂರಿಸುತಲಮೃತ ಎಳನೀರು ಸಕ್ಕರೆಗಳಂ |
ಪಾರುಗಾಣಿಸಿ ಕಾಯಬೇಕು ನೀವೆನುತಲುಪ |
ಚಾರಿಸುತಲಿರೆ ಮೊಳಗೆ ಭೇರಿ ದುಂದುಭಿ ಕಹಳೆಪರಿಸೊಬಗನೇನೆಂಬೆನು || ೧೪೭ ||

**ಧವಳಾರ - ಏಕ**
ದಿಬ್ಬಣಿಗರು ನಡೆತಂದರಾಗ |
ಅಬ್ಬರದೊಳಗಷ್ಟಪುರಕೆ ಬೇಗ || ದಿಬ್ಬಣಿ || ಪ ||
ಸತ್ಯ ಮೂರುತಿ ಪರವಸ್ತು ದಂಡಿಗೆಯೇರಿ |
ವಿಸ್ತಾರದಲಿ ವಾದ್ಯವು ಭೇರಿ ||
ಸತ್ತಿಗೆಚಾಮರ ಛತ್ರಿ ಚೌರಿಗಳಿಂದ |
ಗರ್ತಿಲಿ ಪರಮ ಪುರುಷನು ಬಂದ || ದಿಬ್ಬಣಿ || ೧೪೮ ||

ಸರ್ವಭರಿತ ಸರ್ವಾತ್ಮರೂಪನು ಬಂದ |
ನಿರ್ವಿಕಾರದ ನಿರುಪಮನು ಬಂದ ||
ನಿರ್ವ್ಯಯ ನಿತ್ಯ ನಿರ್ಮಲನು ಬಂದಾನೆಂದು |
ಬಿರಿದಿನ ಕಹಳೆ ಸೂವಳಿಸಿದವು || ದಿಬ್ಬಣಿ || ೧೪೯ ||

ಸಾರವಾಗಿಹ ತನುಸಾಕ್ಷಿರೂಪನು ಬಂದ |
ಘೋರದುರಿತ ಭವಹರನು ಬಂದ ||
ಧೀರನಿರ್ಗುಣ ಭವದೂರ ಬಂದಾನೆಂದು |
ಭೋರೆಂದು ಕಹಳೆ ಸೂವಳಿಸಿದವು || ದಿಬ್ಬಣಿ || ೧೫೦ ||

ಜ್ಞಾನಮತಿಯ ಮನ ಸೂರೆಗೊಂಬವ ಬಂದ |
ತಾನೆ ತಾನಾದ ಕಿಶೋರ ಬಂದ ||
ಜ್ಞಾನಮೂರುತಿ ಭಕ್ತಾಧೀನ ಬಂದಾನೆಂದು |
ಧ್ಯಾನದಿ ಕಹಳೆ ಸೂವಳಿಸಿದವು || ದಿಬ್ಬಣಿ || ೧೫೧ ||

ಉನ್ನತದಲಿ ಸ್ವರವಾದ್ಯ ಭೋರಿಡುತಲಿ |
ಚೆನ್ನಾಗಿ ಪೊಗಳುತಿರುವ ಕಹಳೆ ||
ಕನ್ನಡಿಕಲಶ ಕಾಂತೆಯರು ಸಂದಣಿಯಿಂದ |
ಸನ್ಮತಿ ಗೃಹಕೆ ಬಂದನು ಬೇಗ || ದಿಬ್ಬಣಿ || ೧೫೨ ||

**ಭಾಮಿನಿ**
ಗಣನೆಯಿಲ್ಲದ ವಾದ್ಯರವದಲಿ |
ಗುಣಮಣಿಯು ಬರಲೆಂದು ಸನ್ಮತಿ |
ಯೆಣಿಮೆಯರು ಸಹಿತಿದಿರುಗೊಂಡಾರತಿಯ ಬೆಳಗಿದರು ||
ಪ್ರಣವರೂಪನ ಕರ ಪಿಡಿದು ತ |
ನ್ಮಣಿಮಯದ ಮಂಟಪದಿ ಕುಳಿರಿಸಿ |
ಗಣನೆಯಿಲ್ಲದ ಮಂತ್ರಗಂಧಾಕ್ಷತೆಯ ಸೂಸಿದರು || ೧೫೩ ||

**ಸೌರಾಷ್ಟ್ರ - ತ್ರಿವುಡೆ**
ಎರಗಿ ಸನ್ನುತಿ ಭಕ್ತಿಯಿಂದಲೆ |
ಕರವ ಮುಗಿದೇಕಾಗ್ರ ಚಿತ್ತದಿ |
ಸ್ಥಿರಗೊಳಿಸಿ ದೇವಾಂಗದುಡುಗೊರೆ | ವೆರಸಿ ಬಳಿಕ || ೧೫೪ ||

ವರನಿಗಕ್ಷತೆ ಪಣೆಯೊಳಿಡಿಸುತ |
ಭರದೊಳುಡುಗೊರೆ ಮಾಡೆ ಮಂಗಲ |
ಸ್ವರದೊಳೊಳಯಕೆ ಕರೆದು ತಹುದೆಂ | ದೊರೆದನಾಗ || ೧೫೫ ||

ನೆರೆದ ವಿಪ್ರರು ಪರಮ ಪುರುಷನ |
ಕರವ ಪಿಡಿದೈತಂದು ಕುಳಿರಿಸ |
ಲೆರೆದರಮೃತದ ಹಾಲುತುಪ್ಪದ | ಧ್ವರೆಯೊಳಂದು || ೧೫೬ ||

ಸುಲಭದಲಿ ವೇದೋಕ್ತ ಕ್ರಮದಿಂ |
ಫಲವ ಕೈಯೊಳಗಿಟ್ಟು ಕರತಂ |
ದೊಲವುಮಿಗೆ ನವರತ್ನ ಮಂಟಪ | ದೊಳಗೆ ನಿಲಿಸಿ || ೧೫೭ ||

ತೆರೆ ಪಿಡಿದು ಭೂಸುರರು ಮಂಗಲ |
ಸ್ವರದಿ ಪಾಡಲು ಜ್ಞಾನಮತಿಯನು |
ಮೆರೆವ ಮೆಟ್ಟಕ್ಕಿಯಲಿ ನಿಲಿಸಲು | ಹರುಷದಿಂದ || ೧೫೮ ||

ಭರದ ಶಂಖ ಮೃದಂಗ ಭೇರಿಯು |
ಸರುವ ಘೋಷ ಸಮೂಹ ಮಧ್ಯದ |
ಲಿರುವ ಪರಮಾತುಮನ ಕಂಡರು | ಸರುವರಂದು || ೧೫೯ ||

**ಭಾಮಿನಿ**
ಶಾಸ್ತ್ರವಿಧಿಗಳ ಸೂಕ್ಷ್ಮವರಿವುತ |
ಗೋತ್ರಪ್ರವರವ ಹೇಳಿ ವಿಪ್ರರು |
ಜ್ಞಾತುಜ್ಞೇಯಗಳುಭಯ ಮಂಗಳಾಷ್ಟಕವ ರಚಿಸಿದರು ||
ಶ್ರೋತ್ರಪುಟದಲಿ ದೀರ್ಘಸ್ವರದಿಂ |
ಸೂತ್ರಗಾರರು ಪೇಳುತಿರೆ ಕ್ಷಣ |
ಮಾತ್ರದೊಳಗೆ ಸಮೃದ್ಧಿ ತೆರೆಯನು ತೆಗೆದ ಗುರುವರನು || ೧೬೦ ||

**ಧವಳಾರ - ಏಕ**
ನೆರೆ ಬಹು ವಿಧ ಮಂಗಳಾಷ್ಟಕಗಳಲಿ |
ಸೌರಮ್ಯವೆನೆ ಸ್ವರ ವಾದ್ಯಘೋಷದಲಿ ||
ಸುರಿಗಿ ಸಂಪಿಗೆ ವನಮಾಲೆಯ ಸರಗಳ |
ವರಸುಮುಹೂರ್ತದಿ ಕನ್ನಿಕೆ ಪುರುಷನ |
ಕೊರಳಿಗಿಕ್ಕಿದಾಳೆ ಶುಭದಿಂದ || ಶೋಭಾನೆ || ೧೬೧ ||

ಸಾಕ್ಷಾತ ಪರವಸ್ತು ಹೂಸರಗಳನು |
ಈಕ್ಷಿಸಿ ಸತಿಯ ಕೊರಳಿಗಿಕ್ಕಿದನು ||
ಲಕ್ಷಣದಲಿ ಬೆಲ್ಲ ಜೀರಿಗೆಗಳನದ |
ನಾಕ್ಷಣ ಪುರುಷನ ಬಾಯಿಗಿಕ್ಕಲು ಬಳಿ |
ಕಾಕ್ಷಯದೊಳಗೆ ಕುಳಿತರು || ಶೋಭಾನೆ || ೧೬೨ ||

ಆ ಸಮಯದಲಿ ಸನ್ಮತಿಯೆಂಬ ನೃಪನು |
ಲೇಸಾಗಿ ಸತಿಯು ಸಹಿತ ಹರುಷದಲಿ ||
ಯೇಸು ಧನ್ಯನೊ ತಾನೆನುತ ಮನದಿ ಬಲು |
ಹಾಸ್ಯಭಾವದಿ ಬಂದು ಸಭೆಗೆ ಕರವಮುಗಿದತಿ |
ತೋಷದಲಿ ಕುಳಿತಾ ನಮಿಸುತ || ಶೋಭಾನೆ || ೧೬೩ ||

ಗಂಗೆ ಯಮುನೆ ಸರಸ್ವತಿಯರು ಕೂಡಿ |
ಹೊಂಗಲಶದಿ ತುಂಬಿ ಸತಿಯರು ಪಾಡಿ ||
ಹಿಂಗದ ವಾದ್ಯ ಭೋರಿಡಲದ ನೋಡಿ |
ಮಂಗಳಾತ್ಮಕನಿಗೆ ಸನ್ಮತಿ ತನ್ನ ಸುತೆಯ ಕ |
ರಾಂಗದಲಿ ಧಾರೆಯೆರದನು || ೧೬೪ ||

ತನ್ನಾಧೀನಗಳೆಂಬ ಕರಿಮಣಿಯನು |
ವುನ್ನತವಾದ ಮಂಗಳಸೂತ್ರವನು ||
ಮನ್ನಿಸಿ ಸತಿಯ ಕೊರಳಿಗಿಕ್ಕಿಯೆ ಶುಭ |
ರನ್ನಮಾದಾಭರಣ ಭೂಷಣ ಮಣಿಕಟ್ಟು |
ಚಿನ್ಮಯಾತ್ಮಕನು ಬೆಳಗಿದ || ಶೋಭಾನೆ || ೧೬೫ ||

ಪರಮ ಪುರುಷನಿಗೆ ಜ್ಞಾನಮತಿಯನು |
ಪರಮ ವೈಭವದಿಂದ ಧಾರೆಯೆರೆದನು ||
ನೆರೆದ ಸಭೆಗೆ ತಾಂಬೂಲ ದಕ್ಷಿಣೆಯಿತ್ತು |
ಪರಮ ಭಕ್ತಿಯಲಿ ಮನ್ನಿಸಿ ಕೈಗೂಡುತ ನೃಪ |
ಪರಮಹರುಷದಲಿ ಕುಳಿತನು || ಶೋಭಾನೆ || ೧೬೬ ||

ಜ್ಯೋತಿಯನೆರಡೊಂದ ಮಾಡಿ ಸತಿಯರು |
ಪ್ರೀತಿಯಲಿ ಮಂಗಳ ಶ್ರುತಿಯ ಪಾಡಿದರು |
ಜಾತಿಮಾಣಿಕ ನವರತುನ ಮಂಟಪದೊಳು |
ಸಾತಿಶಯದಿ ಬೆಳಗುವ ದಂಪತಿಗತಿ |
ನೂತನದಾರತಿಯ ಬೆಳಗಿರೆ || ಶೋಭಾನೆ || ೧೬೭ ||

ಅಂಗನೆ ಸಹಿತಲೆ ಪರಮಪುರುಷನು |
ರಂಗುಮಾಣಿಕದ ಮಂಟಪದೊಳೊಪ್ಪಿದನು |
ಸಂಗ ರಹಿತ ಪರಮಾತ್ಮಗೆ ಬಹುವಿಧ |
ದಂಗದಿ ಸಾಮವೇದಗಳಲಾಶೀರ್ವಾದ |
ಮಂಗಳಾಕ್ಷತೆಯ ತಳಿದರು || ಶೋಭಾನೆ || ೧೬೮ ||

ಏಕಭಕ್ತಿಯಲಿ ಸನ್ಮತಿಯೆಂಬ ನೃಪನು ವಿ |
ವೇಕದಿ ಪರಮಪುರುಷಗೆ ಸುತೆಯನು |
ಏಕಭಕ್ತಿಯಲಿ ಕೈಗೂಡಿಸಿ ಬಳಿಕವ |
ರೇಕವಾಗಿಯೆ ಒಳ ತೆರಳಿದರೆಂಬ ವಿ |
ವೇಕದ ಹೆಗ್ಗಹಳೇ ಮೊಳಗಲು || ಶೋಭಾನೆ || ೧೬೯ ||

**ಕೇದಾರಗೌಳ - ಅಷ್ಟ**

ದೀನನಾಗಿಯೆ ನೃಪ ನೆರೆದ ಪರ |
ಮಾನ್ನ ಭಕ್ಷ್ಯಂಗಳಲಿ ||
ಆನಂದದಲಿ ತೃಪ್ತಿಪಡಿಸಿ ತಾಂಬೂಲವ |
ತಾನಾಗ ಕೊಡಿಸಿದನು || ೧೭೦ ||

ಸಲೆ ಸಿದ್ಧಾಂತದಿ ಬಹುಶಾಸ್ತ್ರ ವಿಧಿಯನಾಗ |
ವಿಲೆಯದಿಂದಲೆ ಮಾಡಿಸಿ ||
ನೆಲೆಯಾಗಿ ಗೃಹದ ಪ್ರವೇಶವಾಗಲು ನೃಪ |
ಬಲೆಯ ಕಳೆದ ಭವದ || ೧೭೧ ||

ಅರ್ತಿಯಿಂದಲೆ ಸತಿ ಪುರುಷರಿಬ್ಬರಿಗೊಪ್ಪಿಸ |
ಮುತ್ತಿನ ಮಂಟಪದಿ ||
ಮುಕ್ತಾಂಗನೆಯರು ನೆರೆದೋಕುಳಿಗಳ |
ನರ್ತಿಯೊಳಾಡಿದರು || ೧೭೨ ||

ಅಷ್ಟಪುರಗಳಧಿಕಾರದ ಪಟ್ಟವ |
ಕಟ್ಟಿದನಾಕ್ಷಣದಿ ||
ಕೊಟ್ಟು ಸರ್ವಸ್ವವ ಪರಮಪುರುಷನೊಳ |
ಗಿಟ್ಟನು ರಾಜ್ಯವನು || ೧೭೩ ||

**ವಾರ್ಧಕ**
ಈ ರೀತಿಯಿಂದ ಸರ್ವಸ್ವ ವಿಷಯವನೆಲ್ಲ |
ಸೇರಿಸುತಲಾತನಲಿ ಬಳಿಕ ಸನ್ಮತಿನೃಪತಿ |
ಜರಗಿಸಲು ಸಕಲ ವಿಷಯವನು ಭತ್ತದ ಜೊಳ್ಳ ಹಾರಿಸುವ ತೆರದಲಂದು ||
ತೋರುವೀತನು ಕರಣ ಸಾಕ್ಷಿಯೇ ತಾನಾಗಿ |
ತೂರಿ ಸೂರ್ಯನ ಕೋಟಿ ಮೀರಿ ಗುರು ಕರಿಮುಖನ |
ಭಾರಿ ಕರುಣದಲಿ ನೃಪ ಸಾರಿದವರಾನಂದದೋರಂತೆ ಮುಕ್ತಿಪದವ || ೧೭೪ ||

**ಭಾಮಿನಿ**
ಮೆರೆವ ಜೀವನೆ ಜ್ಞಾನಮತಿ ತಾ |
ಬರಿಯ ಹಂಕೃತಿಯವನೆ ಸನ್ಮತಿ |
ನೆರೆದ ಸಭೆ ಕರಣೇಂದ್ರಿಯೆಂಬೀಯಷ್ಟಪುರದೊಳಗೇ ||
ಮೆರೆವ ಪರಮಾತುಮನು ತಾನೇಂ |
ದರಿದು ಗುರುಮುಖದಿಂದ ಮೋಕ್ಷದ |
ಸಿರಿಯ ಸೇರುವ ಪರಿಯ ಗುರುಶಿಷ್ಯನಿಗೆ ಬೋಧಿಸಿದ || ೧೭೫ ||

**ಸೌರಾಷ್ಟ್ರ - ತ್ರಿವುಡೆ**
ಬಂದ ಭವಗಳ ಕಳೆದು ಮುಕ್ತಿಗೆ |
ಸಂದು ಪರಮಾನಂದ ನಿಜದಲಿ |
ನಿಂದ ನಿಲವನು ಯೀ ವಿಧಾನದ | ಲೆಂದ ಕೃತಿಯ || ೧೭೬ ||

ಸಂದ ಸಜ್ಜನರಾದವರು ನಲ |
ವಿಂದ ತಿಳಿದಿದರೊಳಗೆ ತಪ್ಪಿರೆ |
ಕುಂದನೆಣಿಸದೆ ತಿದ್ದಿ ಮೆರೆಸಲಿ | ಚಂದದಿಂದ || ೧೭೭ ||

ವೇದಸ್ಮೃತಿಶಬ್ದಾರ್ಥದನುಭವ |
ದಾದಿಯರಿಯೆನು ಹೆಣ್ಣು ಬಾಲಕಿ |
ಯಾದ ಕಾರಣ ಪ್ರಾಣವಕ್ಷರ | ಭೇದವಿರಲು || ೧೭೮ ||

ಆದರದಿ ತಿದ್ದುವದು ಬಲ್ಲವ |
ರಾದವರುದಾಸಿನವ ಮಾಡದೆ |
ವಾದರಹಿತನ ಚರಿತೆಯನು ಬರೆ | ದೋದಿದವರು || ೧೭೯ ||

ಪರಮ ತತ್ವಜ್ಞಾನರಾಗಿಯೆ |
ಪರಮ ಪುರುಷನನರಿದಚಲವಹ |
ಪರಮ ಪದವಿಯ ಪದವರಿದು ಸು | ಸ್ಥಿರದ ನುಡಿಯ || ೧೮೦ ||

ನರತನುವು ಜಡ ಕರಣ ಪರಮನು |
ಬೆರೆದು ಪ್ರೇರಿಸಿದಂತೆ ಯೀ ಕೃತಿ |
ಯೊರದೆ ಗುರುಗಣನಾಥನಾವರ | ಕರುಣದಿಂದ || ೧೮೧ ||

**ಧವಳಾರ**

ಮಂಗಳ ಪರಮ ಪುರುಷ ಹರಿಗೆ |
ಮಂಗಳ ಪರತರ ವಸ್ತುವಿಗೆ ||
ಮಂಗಳ ಭಕ್ತರ ಹೃದಯದಿ ನೆಲಸಿದ |
ಸಂಗರಹಿತ ಪರಮಾತ್ಮನಿಗೆ ||
ಮಂಗಳಂ ಜಯ ಮಂಗಳಂ || ೧೮೨ ||

ಮಂಗಳ ಶಕ್ತಿಸರ್ವೇಶ್ವರಿಗೆ |
ಮಂಗಳ ಪ್ರಕೃತಿಯ ರೂಪಳಿಗೆ ||
ಮಂಗಳ ಪ್ರೀತಿಯ ಭಕ್ತರ ಹೃದ್ವಾಸಿಗೆ |
ಮಂಗಳ ಜ್ಯೋತಿ ಪ್ರಕಾಶಳಿಗೆ | ಮಂಗಳಂ || ೧೮೩ ||

ನಿರ್ವ್ಯಯ ನಿತ್ಯ ನಿರಂಜನಗೆ |
ನಿರ್ವಿಕಾರ ನಿತ್ಯ ನಿರುಪಮಗೆ ||
ಸರ್ವೇಶ್ವರ ಸದ್ಗುರು ಸದಾಶಿವನಿಗೆ |
ಸರ್ವ ಚೇತನ ಪರಮಾತ್ಮನಿಗೆ || ಮಂಗಳಂ || ೧೮೪ ||

ಆಧಾರವನರಿದಾತುಮನ |
ಶೋಧಿಸಿ ತಿಳಿದ ಮಹಾತುಮನ ||
ಸಾಧಿಸಿ ಜ್ಯೋತಿರ್ಲಿಂಗದ ನೆಲೆಗಂಡವ |
ರಾಧರಿಸುವ ಪರಮಾತ್ಮನಿಗೆ || ಮಂಗಳಂ || ೧೮೫ ||

ಒಂದೆ ಮನದ ನಿಜ ಭಕ್ತರನು |
ಸಂದೇಹವಿಲ್ಲದೆ ಸಲಹುವನು |
ಚೆಂದದಿ ಭಕ್ತರಿಗೊಲಿದು ಮುಕ್ತಿಯನೀವ |
ತಂದೆ ಶ್ರೀಗುರು ಗಣನಾಥನಿಗೆ ||
ಮಂಗಳಂ ಜಯಂ ಮಂಗಳಂ || ೧೮೬ ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಕರ್ಕಿ ಸೂರಿ ವೆಂಕಟರಮಣ ಶಾಸ್ತ್ರಿಗಳಿಂದ ೧೮೮೬ರಲ್ಲಿ ಪ್ರಥಮಬಾರಿಗೆ ಮುದ್ರಣ, ೧೮೯೯ರಲ್ಲಿ ಹವ್ಯಕ ಅಧ್ಯಯನ ಕೇಂದ್ರ ಬೆಂಗಳೂರು ಮರು ಮುದ್ರಣ

**ಪ್ರಸಂಗ ಪ್ರತಿ ಆಧಾರ:** ಹವ್ಯಕ ಅಧ್ಯಯನ ಕೇಂದ್ರ ಬೆಂಗಳೂರು ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ನಾರಾಯಣ ಶಾನಭಾಗ, ನಾರಾಯಣ ಯಾಜಿ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಬರವಣಿಗೆ:** ಶಶಿಕಲಾ ಮೂರ್ತಿ

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ